9-30 A. M.

CALLING ATTENTION TO MATTERS OF URGENT PUBLIC IMPORTANCE

(*1*) *Re : Fire accident in the Cotton Ginning and Pressing Factory at Hubli.*

SRI B. B. SAYANAK (Belgaum).—Madam Speaker, I call the attention of the Minister for Co-operation to the fire accident that occurred in Cotton Ginning and Pressing Factory at Hubli resulting in th death of 8 persons and serious injuries to many others.

SRI K. H. RANGANATH (Minister for Co-operation).—In response to the Calling Attention Notice of the hon'ble Members, I wish to make the following statement :—

The fire was first observed at about 5·15 P. M. on Monday, 28-3-1977, in the Cotton, Ginning and Pressing Factory of the Karnataka State Co-operative Marketing Federation at Hubli. The factory Superintendent immediately informed the Regional Manager at Hubli who is concurrently acting as the Factory Manager, at the Regional Office which is situated at Deshpande Nagar about 2 Kms. away. The Regional Manager, who reached the factory by about 5·30 P M. immediately called for the police and ambulance. As the KMC. Hospital reported that their ambulance was out of order, the Regional Manager made immediate arrangements with a co-operative hospital at Hubli who sent their ambulance in which 3 injured people were taken to the K.M.C. Hospital. Federation's car and another car which was available near the premise were used to carry the remaining 5 injured people to the K.M.C. Hospital. This action was taken around 5·45 P.M. The Police who had arrived just then, also assisted it the removal of the injured. Meanwhile, the factory Supervisor had already alerted the local fire fighting services. Two fire engines from the municipality arrived a little after 6-00 P.M. Another fire engine from the railways also arrived shortly there after. Further two fire Engines which had been summoned from Gadag. arrived between 7-00 and 7-30 P.M.

Of the 8 injured people taken to the hospital, 4 have since died and the other 4 are still under treatment, All the victims were women coolies who had been employed on contract by the international Cotton Corporation, a Bombay firm which had hired out the factory premises along with several other firms for getting their cotton ginned and pressed.

With the continuous operation of the firefighting services, the fire was brought under control in the early hours of Tuesday, 29th March

1977, when the dead bodies of 2 more women coolies were found at the site of the fire inside the factory, bringing the total number of dead persons to 6.

The pressing of bales had been stopped at 5-00 P.M that evening However some of the contract labourers were still in the palla house adjoining the cotton baling press. The alarm was first given by one of these women who ran out with her sari on fire. Immediately there was panic among the other women coolies in the palla houses end they also started running out. The clothes of some of these women coolies had also caught fire. In the confusion, the fire started spreading to the cotton which was stored in adjoining palla houses including the central hall.

There were altogether 24 fire extinguisers and 24 fire buckets which were installed in the premises. All the 24 extinguishers had been installed in the first week of March 1977. with the assistanee of the factory employees who were readily available, the factory Superintendent tried his best to control the fire immediately by using this equipment, pending arrival of the fire-engines. The electrician of the factory immediately ran to the transformer station located in the compound and cut off the mains. The use of the hand fire-extinguishers greatly helped to control the spread of the fire which would have otherwise engulfed the ginning section.

According to a statement made by one of the injured labourers to the Police some sparks had been seen near the exhaust fan located in the last palla house adjacent to the rear verandah in the pressing section. It is therefore presumed that the fire was caused by a short circuit near the said exhaust fan.

There is a well with ample water supply, situated in the pressing section inside the building. The well was provided with both an electric and a diesel engine for pumping water. However, as the well was surrounded by the flames, it could not be readily utilised by the fire-fighting agencies consequently, arrangements had to be made to get water from the nearby well located in the premises of Mahadeshwara Textiles.

Although the 10 victims of the fire (6 dead and 4 injured) are not the regular employees of the Federation or even contract labour engaged by the Federation, the Federation, on humanitarian grounds, has made immediate arrangements to disburse Rs. 750 in respect of each of the dead persons and Rs. 500 in respect of others, to the next of kin. Further, the authorities of International Cotton Corporation have announced that they will be paying necessary compensation as per law.

It is found that there has been no damage to the factory machinery including the press, as a result of the fire. Even the wooden platform of the press which is adjacent to the palla house where the fire was blazing, largely in tact Some damage has however occured to the electrical wiring, rolling-shutters and the roof of the effected portions of the building. The cost of these repairs which is covered by insurance, would be around Rs. 1 lakh. In addition, about Rs. 10 lakhs worth of cotton belonging to Anglo French Textiles Ltd , of Pondicherry was burnt Under the legal agreement between the Federation and AFT Tsxtiles Ltd.; the liability for this will have to be borne by AFT textiles Ltd., All these stocks were fully insured against fire. some cotton belonging to Messrs. International Cotton Corporation, Pradeep Bros., and other lessees, the value of which is not yet known, was also destroyed. The Federation is not responsible for these losses.

SRI B B SAYANAK.–May I know why the Factory Superintendent did not ring up the Fire Fighter Agency of the Corporation immediately ? Why did he inform first the regional Manager ? Was is not his duty to first ring up to the Fire Fighter Agency ?

SRI K. H. RANGANATH.— Because of the confusion he must have immediately informed his boss. But he has also taken action to inform the fire fighter agency immediately. though he had to first inform the fire fighter agency in the confusion he might have not done it.

ಶ್ರೀ ಕಾಗೋಡು ತಿಮ್ಮಪ್ಪ.–ಮಾನ್ಯ ಮಂತ್ರಿಗಳು ಹೇಳಿರುವ ಹೇಳಿಕೆಯಲ್ಲಿ ಒಂದು ವಿಶಾದದ ಸಂಗತಿ ಏನೆಂದರೆ ಈ ಘಟನೆ ಬಗ್ಗೆ ಒಂದು ತನಿಖೆ ಮಾಡುವುದರ ಬಗ್ಗೆ ಯಾವುದನ್ನೂ ಪ್ರಸ್ತಾಪ ಮಾಡಲಿಲ್ಲಾ. ನಮಗೆ ತಿಳಿದು ಬಂದಂಥಾ ವರದಿ ಆಧಾರದ ಮೇಲೆ ಈಪೊತ್ತು ಅಲ್ಲಿ ನಡೆದಂಥಾ ಘಟನೆಗೆ ಮುಖ್ಯವಾದ ಕಾರಣ ಅಲ್ಲಿರತಕ್ಕಂಥಾ ಮ್ಯಾನೇಜರ್ ತಮ್ಮ ಕಾರ್ಯ ನಿರ್ವಹಣೆಯಲ್ಲಿ ಸರಿಯಾಗಿ ಕೆಲಸ ಮಾಡದೇ ಇದ್ದುದರಿಂದ ಅಂದರೆ ಅಲ್ಲಿ ಫೈರ್ ಫೈಟರ್ಸ್ ಸಾಮಾನುಗಳು ಏನು ಇಡ ಬೇಕಾಗಿತ್ತು ಅವನ್ನು ಇಡದೇ ಇದ್ದುದರಿಂದ ಈ ಅನಾಹುತವಾದದ್ದು ಎಂದು ತಿಳಿದಿದ್ದೇನೆ ಜೊತೆಗೆ ಪತ್ರಿಕೆಯಲ್ಲೂ ಈ ವರದಿ ಬಂದಿದೆ ಮತ್ತು ಅಲ್ಲಿನ ಜನರೂ ಕೂಡ ಪತ್ರ ಬರೆದಿದ್ದಾರೆ. ಆ ಜನರು ಒಂದು ರೂಮಿನಲ್ಲಿ ಏನು ಕೆಲಸ ಮಾಡುತ್ತಿದ್ದರು. ಅಲ್ಲಿಗೆ ಬೆಂಕಿ ಬಿದ್ದಿದೆ. ಆದುದರಿಂದ ಅಲ್ಲಿನ ಜನ ಸಾಯುವಂಥಾ ಸಂದರ್ಭ ಈಪೊತ್ತು ಬಂದಿತು. ತಮ್ಮ ವರದಿ ಪ್ರಕಾರ ಅಲ್ಲಿ 6 ಜನ ಸತ್ತಿದ್ದಾರೆ ಎಂದು ಇದೆ. ಅಲ್ಲಿ 12 ರಿಂದ 15 ಜನವರೆಗೆ ಸತ್ತಿದ್ದಾರೆ. ಖಚಿತವಾದ ವಿಷಯ ಅಲ್ಲಿರತಕ್ಕಂಥಾ ಜನರಿಗೂ ಗೊತ್ತಿದೆ. ಅಲ್ಲಿ ಸತ್ತಿರುವ ಶವಗಳನ್ನು ತೆಗೆದುಕೊಂಡು ಹೋಗಲು 15—16 ಗಾಡಿಗಳು ಹೋಗಿದ್ದರೂ ಅವರಿಗೆ ಶವಸಿಗದೇ ಇರುವ ಸನ್ನಿವೇಶ ನಡೆದಿದೆ. ಅಗ್ನಿ ಶಾಮಕ ದಳದವರು ಕೂಡ ತಡವಾಗಿ ಬಂದಿದ್ದರಿಂದ ಮತ್ತು ಸುತ್ತ ಮುತ್ತ ಇರುವ ಬಾಗಿಲುಗಳು ಮುಚ್ಚಿದುದ್ದರಿಂದ ಅಲ್ಲಿನ ಕಾರ್ಮಿಕರು ಹೊರಗಡೆ ಬರಲು ಎಲ್ಲೂ ಅವಕಾಶ ಆಗದೇ ಇದ್ದುದರಿಂದ ಈ ಅಗ್ನಿ ಆಕ್ಸ್ಮೀ ಅವರಿಸಿ ಅವರ ಸಾವಿಗೆ ಕಾರಣ ವಾಯಿತು. ಬಾಗಿಲುಗಳು ಮುಚ್ಚಿದುದರಿಂದ ಈ ರೀತಿ ಗೊಂದಲ ಸಮಯ ಪರಿಸ್ಥಿತಿ ಉದ್ಭವವಾಯಿತು. ಆದುದರಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದು ಏನೆಂದರೆ ಈಪೊತ್ತು ಅಲ್ಲಿ ಖಚಿತವಾಗಿ ಸತ್ತವರ ನಂಬ್ಯೆ ಎಷ್ಟು ಅನ್ನುವುದನ್ನು ತಿಳಿಸಬೇಕಾಗಿದೆ ಮತ್ತು ಇದಕ್ಕೆ ಯಾರು ಕಾರಣರು ಅನ್ನುವುದು ತಿಳಿಯಬೇಕಾದರೆ ಈ ಘಟನೆ ಬಗ್ಗೆ ಒಂದು ನ್ಯಾಯಾಂಗ

ತನಿಖೆ ಆಗಬೇಕು. ಇದರ ಬಗ್ಗೆ ಕೆಲವು ಸಂಶಯಗಳು ಇರುವುದರಿಂದ ಈ ಕಾರಣಗಳನ್ನು ಗೊತ್ತು ಹಚ್ಚುವುದಕ್ಕೆ ಇದರ ಬಗ್ಗೆ ಒಂದು ನ್ಯಾಯಾಂಗ ತನಿಖೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಕೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.— ಅಧ್ಯಕ್ಷರೇ, ನಾನೂ ಕೂಡ ಈ ಘಟನೆ ಬಗ್ಗೆ ವಿಶಾದಪಟ್ಟಿದ್ದೇನೆ. ಅಲ್ಲದೆ ಈ ಮನೆಯ ಸದಸ್ಯರೂ ಕೂಡ ಈ ಘಟನೆ ಬಗ್ಗೆ ಅಷ್ಟು ಲಘುವಾಗಿ ಭಾವಿಸುವುದಿಲ್ಲ ಎಂದು ತಿಳಿಯುತ್ತೇನೆ, ಸರ್ಕಾರದವರೂ ಸಹ ಲಘುವಾಗಿ ಭಾವಿಸುತ್ತಾ ಇಲ್ಲ. ಇದು ಯಾವ ರೀತಿ ಆಗಿದೆ ಅನ್ನುವುದನ್ನು ಹೇಳುತ್ತೇನೆ. ಸಾಮಾನ್ಯವಾಗಿ 5 ಗಂಟೆ ಆದಮೇಲೆ ಆ ಫ್ಯಾಕ್ಟರಿ ಮುಚ್ಚಿ ಎಲ್ಲರೂ ಆಚೆಗೆ ಬರಬೇಕು. ಆ ಪ್ರಕಾರ ಸಿಗ್ನಲ್ ಕೂಡ ಮಾಡಿದ್ದಾರೆ. ಆ ಫ್ಯಾಕ್ಟರಿಯಲ್ಲಿ ಎರಡು ಬಾಗಿಲುಗಳು ಇವೆ. ಹಿಂದೆ ಒಂದು ಬಾಗಿಲು ಮುಂದೆ ಒಂದು ಬಾಗಿಲು ಇದೆ. ಈ ಷಾರ್ಟ್ ಸರ್ಕೂಟ್ ಆದದ್ದು ಹಿಂದಿನ ಬಾಗಿಲಿನಿಂದ ಎಂದು ಕಂಡುಬಂದಿದೆ. ನನಗೆ ಗೊತ್ತಿರುವ ಪ್ರಕಾರ ಹಿಂದಿನ ಬಾಗಿಲಿನಿಂದ ಎಲ್ಲರನ್ನೂ ಆಚೆಗೆ ಕಳುಹಿಸಿದ್ದಾರೆ ದುರ್ದೈವದಿಂದ ಕೆಲವು ಹೆಣ್ಣು ಮಕ್ಕಳು ನಿಧಾನವಾಗಿ ಅಲ್ಲಿ ಕೆಲಸ ಮಾಡುತ್ತಾ ಇದ್ದರು ಅಲ್ಲಿ ಒಬ್ಬ ಹೆಣ್ಣು ಮಗಳಿಗೆ ಸೀರೆಗೆ ಬೆಂಕಿ ಹತ್ತಿತು. ಅವನ್ನು ಆರಿಸಲು ಅವಸರವಾಗಿ ಇನ್ನೊಬ್ಬರು ಬಂದಿದ್ದಾರೆ. ವರದಿಯಾಗಿರ ತಕ್ಕಂಥಾದ್ದು ಹೀಗೆ ಇದೆ. ಮಾನ್ಯ ಸದಸ್ಯರು ಏನು ಹೇಳುತ್ತಾರೆ ಎಂದರೆ ಈ ಘಟನೆ ಏನು ನಡೆಯಕ್ಕೋ ತತ್‌ಕ್ಷಣವಾಗಿ ಲಿಗಲೇ ಕಾರ್ಯ ಕ್ರಮ ಕೈಗೊಳ್ಳಬೇಕಾಗಿತ್ತು ಎಂದು ಹೇಳಿದ್ದಾರೆ. ಮತ್ತು ಅಲ್ಲಿ ಇನ್ನೂ ಹತ್ತಾರು ಜನರು ಸತ್ತಿದ್ದಾರೆ ಅಂತ ಹೇಳುತ್ತಾನೆ. ಪತ್ರಿಕೆಯಲ್ಲಿ ನಾನೂ ಕೂಡ ಓದಿದ್ದೇನೆ. ಸಂಯುಕ್ತ ಕರ್ನಾಟಕದ ಪತ್ರಿಕೆಯಲ್ಲಿ ಇದರ ಬಗ್ಗೆ ಏನು ಸಂಪಾದಕೀಯ ಬರೆದಿದ್ದಾರೆ ಅದನ್ನು ಇಟ್ಟುಕೊಂಡೇ ನಾನು ವಿಚಾರ ಮಾಡಿದ್ದೇವೆ ಅಲ್ಲಿಗೆ ಅಧಿಕಾರಿಗಳೂ ಕೂಡ ಹೋಗಿ ಬಂದಿದ್ದಾರೆ. ಅಧ್ಯಕ್ಷರೂ ಕೂಡ ಹೋಗಿ ಬಂದಿದ್ದಾರೆ, ಅದರ ಒಂದು ಆಧಾರದ ಮೇಲೆ ಈ ಒಂದು ವರದಿಯನ್ನು ಈ ಸಭೆಯ ಮುಂದೆ ಇಟ್ಟಿರತಕ್ಕಂಥಾದ್ದು, ಈ ಸಭೆಯಲ್ಲಿ ಯಾವ ವಿಷಯವನ್ನೇ ಆಗಲಿ ಮುಚ್ಚಿಡಬೇಕು ಅನ್ನುವುದು ಸರ್ಕಾರದ ಅಭಿಪ್ರಾಯವಲ್ಲ. ಈಪ್ರೊತ್ತು ತಮಗೆ ಇದರ ಅಂಕಿ ಅಂಶವನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಸ್ಟೇಟ್ ಕೋ-ಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿ 83 ಜನ ಹೆಣ್ಣು ಮಕ್ಕಳು 35 ಜನ ಗಂಡಸರು ಕೆಲಸ ಮಾಡುತ್ತಾ ಇದ್ದಾರೆ. ಅದರಲ್ಲಿ ಯಾರಿಗೂ ತೊಂದರೆ ಆಗಿಲ್ಲ. ಆಂಗ್ಲೋ ಫ್ರೆಂಚ್ ಟೆಕ್ಸ್‌ಟೈಲ್ಸ್ ಲಿಮಿಟೆಡ್ ಇದರಲ್ಲಿ 5 ಜನ ಹೆಣ್ಣು ಮಕ್ಕಳು 6 ಜನ ಗಂಡಸರು ಕೆಲಸ ಮಾಡುತ್ತಿದ್ದಾರೆ. ಇನ್ನು ಇಂಟರ್ ನ್ಯಾಷನಲ್ ಕಾಟನ್ ಕಾರ್ಪೊರೇಷನ್‌ನಲ್ಲಿ 50 ಜನ ಹೆಣ್ಣು ಮಕ್ಕಳು 8 ಜನ ಗಂಡಸರು ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟವರು ಸತ್ತಿದ್ದಾರೆ. ಆ ರೀತಿ ವರದಿ ಬಂದಿದೆ.

ಮತ್ತೆ ಪ್ರದೀಪ್ ಬ್ರದರ್ಸ್‌ನವರು ಯಾರನ್ನೂ ನೇಮಕ ಮಾಡಿಕೊಂಡಿಲ್ಲ. ಅಲ್ಲಿ ಇನ್ನೂ ಹೆಚ್ಚಿನ ಶವಗಳಿರಬಹುದೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಆದರೆ ಆ ವಿಷಯ ನಮಗೆ ಗೊತ್ತಾಗಿಲ್ಲ ಅದು ಸತ್ಯಾಂಶವೆಂದು ಕಂಡುಬಂದರೆ ಆ ಬಗ್ಗೆ ಏನು ಕ್ರಮ ಕೈಕೊಳ್ಳಬೇಕೋ ಅದನ್ನು ಕೈಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ ಮತ್ತು ಇದು ಇಷ್ಟಕ್ಕೇ ನಿಲ್ಲುವುದಿಲ್ಲ. ಇದು ಯಾವ ಕಾರಣದಿಂದ ಆಯಿತು, ಎಲೆಕ್ಟ್ರಿಕ್ ಶಾರ್ಟ್ ಸರ್ಕೀಟ್‌ನಿಂದ ಆಯಿತೇ ಎಂಬ ಬಗ್ಗೆ ಪುನಃ ವಿಚಾರಣೆ ಮಾಡಲು ತಜ್ಞ ಅಧಿಕಾರಿ ಒಬ್ಬರನ್ನು ಕಳುಹಿಸಿ ವಿಚಾರಣೆ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಐ. ಜಿ. ಸನದಿ.—ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿಯಲ್ಲಿ ನಡೆದಿರತಕ್ಕಂಥ ಈ ಹೃದಯ ವಿದ್ರಾವಕ ಘಟನೆಯನ್ನು ಅಷ್ಟೊಂದು ಸುಲಭವಾಗಿ ಮತ್ತು ಸರಳವಾಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದು ನನ್ನ ವೈಯಕ್ತಿಕ ಭಾವನೆಯಾಗಿದೆ. ಏಕೆಂದರೆ ಕಳೆದ ವರ್ಷವೂ ಸಹ ಇದೇ ರೀತಿ ನಡೆದಿತ್ತು. ಇಂಟರ್‌ನ್ಯಾಷನಲ್ ಕಂಪನಿಯವರು ವೆ ದಿದೇ ಲಕ್ಷಾಂತರ ರೂಪಾಯಿಗಳ ಮಾಲಿಗೆ ಇನ್‌ಷ್ಯೂರೆನ್ಸ್ ಮಾಡಿಸಿ ಈ ರೀತಿ ಬೆಂಕಿ ಹಚ್ಚುತ್ತಾರೆಂಬ ವದಂತಿ ಇದೆ. ಹೋದವರ್ಷ ಇದೇ ರೀತಿ ಬೆಂಕಿ ಬಿದ್ದಾಗ ಮುಂಜಾನೆಯಿಂದ ಹಿಡಿದು ಸಾಯಂಕಾಲದವರೆಗೆ ಬೆಂಕಿ ಆರಿಸಲು ಕೆಲಸ ಮಾಡಿದ್ದಾರೆ. ಆ ಸಮಯದಲ್ಲಿ ಕೆಲವರು ಈ ಬೆಂಕಿ ರಾತ್ರಿಯೇ ಬೀಳಬೇಕಾಗಿತ್ತು. ಆದರೆ ಹಗಲು ಬಿದ್ದಿದೆ ಎಂದು ಹೇಳುತ್ತಿದ್ದುದನ್ನು ಕೇಳಿದಾಗ ಇದರಲ್ಲಿ ಏನೋ ರಹಸ್ಯ ಅಡಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಒಂದು ರಹಸ್ಯ ಇನ್‌ಷ್ಯೂರೆನ್ಸ್

ಕಂಪನಿಯವರಿಗೆ ಮತ್ತು ಮುಂಬೈನಲ್ಲಿರತಕ್ಕಂಥ ಪ್ರತಾಪ್ ಥಾಕರ್ ಅವರಿಗೆ ಮಾತ್ರ ತಿಳಿದಿರುತ್ತದೆ. ಏಕೆಂದರೆ, ಅವರು ರಾತ್ರಿ 9 ಗಂಟೆಯ ಹೊತ್ತಿಗೆ ಇನ್‌ಷ್ಪೂ ಕ್ಟರ್‌ನ್ಸ್ ಆಫೀಸರನ್ನು ಕರೆದುಕೊಂಡು ಬರುತ್ತಾರೆ. ಅವರು ಇನ್‌ಷ್ಪೂ ಕ್ಟರ್‌ನ್ಸ್ ಮಾಡಿದ ಹಣವನ್ನು ಕೊಡುತ್ತಾರೆ. ಈ ರೀತಿಯ ಒಂದು ಸಂಚು ನಡೆದಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಈ ಇಂಟರ್‌ನ್ಯಾಷನಲ್ ಕಂಪನಿಯವರು 50 ಜನ ಕೂಲಿಗಾರರನ್ನು ಕೆಲಸಕ್ಕೆ ಇಟ್ಟುಕೊಂಡಿದ್ದಾರೆ. ಈ ಬಡ ಜನರನ್ನು ಅವರು ಶೋಷಣೆ ಮಾಡುತ್ತಿದ್ದಾರೆ ಈ ಬಡ ಹೆಣ್ಣು ಮಕ್ಕಳನ್ನು ನೇರವಾಗಿ ಈ ಕಂಪನಿಯವರೇ ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ, ಒಬ್ಬ ದಳ್ಳಾಳಿ ಮುಖಾಂತರ ದಿನಗೂಲಿಯ ಮೇಲೆ ನೇಮಕ ಮಾಡಿ ಕೊಂಡಿರುತ್ತಾರೆ. ಇವರುಗಳು ತಮ್ಮ ಆರೋಗ್ಯವನ್ನು ಸಹ ಕಡೆಗಣಿಸಿ ಅಲ್ಲಿ ಕೆಲಸ ಮಾಡುತ್ತಾರೆ. ಇವರುಗಳು ಕ್ಷಯ ರೋಗಕ್ಕೆ ಏನಾದರು ತುತ್ತಾದರೆ, ಅದಕ್ಕೆ ನೂಕ್ಷ್ಮ ರಕ್ಷಣೆ ನೀಡಲು ಕಾನೂನಿನಲ್ಲಿ ಅದಕ್ಕೆ ಅವಕಾಶವಿಲ್ಲ. ಇಂತಹ ಸಾವಿರಾರು ಜನರು ಕೆಲಸ ಮಾಡುತ್ತಿದ್ದಾರೆ. ಆದರೆ ಇವರುಗಳಿಗೆ ಹಾಜರಾತಿ ಹಾಕುವ ಪದ್ಧತಿ ಇಲ್ಲ. ಹಾಜರಾತಿ ಹಾಕದಿದ್ದರೆ ಏನಾದರು ದುರ್ಘಟನೆಯಾದರೆ ಇವರಿಗೆ ಕಾನೂನಿನ ಮೂಲಕ ರಕ್ಷಣೆ ಸಿಗುವುದಿಲ್ಲ. ಆಲ್ಲಿ 24–5 ಅಗ್ನಿಶಾಮಕ ಸಾಧನಗಳಿದ್ದರೂ ಸಹ ಅವುಗಳನ್ನು ಕೂಡಲೇ ಬಳಸಲು ಸಾಧ್ಯವಾಗಿಲ್ಲವೆಂದು ನನಗೆ ತಿಳಿದುಬಂದಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ನಿಜಕ್ಕೂ ಈ ಬಗ್ಗೆ ನ್ಯಾಯಾಂಗ ವಿಚಾರಣೆ ಆಗಲೇ ಬೇಕು ಮತ್ತು ತಪ್ಪಿತಸ್ಥರು ಯಾರೇ ಇರಲಿ, ಅವರು ಎಷ್ಟೇ ಪ್ರಭಾವಕ್ಕೆ ಒಳಗಾದವರಾಗಿರಲೀ, ಅವರಿಗೆ ತಕ್ಕ ಶಾಸ್ತಿಯಾಗಲೇ ಬೇಕು. ಈ ಇಂಟರ್‌ನ್ಯಾಷನಲ್ ಕಂಪನಿಯವರು ಕೆಲವರ ಸಹಾಯದಿಂದ ಸರ್ಕಾರಕ್ಕೆ ಮೋಸ ಮಾಡುವಂತಹ ಒಂದು ಕಾರಾಸ್ಥಾನ ನಡೆಸಿದ್ದಾರೆ. ಇಂತಹವರಿಗೆ ತಕ್ಕ ಶಾಸ್ತಿಯಾಗಲೇ ಬೇಕು. ಈ ಬಗ್ಗೆ ನನ ನಮ್ಮ ಏನೆಂತಿ ಏನೆಂದರೆ. ಈ ಬಗ್ಗೆ ಕರ್ನಾಟಕ ಘನನಸರ್ಕಾರದವರು ನ್ಯಾಯಾಂಗ ವಿಚಾರಣೆ ಮಾಡಿಸಿ ತಪ್ಪಿಸ್ಥರನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಇದು ಪ್ರೈವೇಟ್ ಕೇಸ್ ಇದ್ದರೆ ನ್ಯಾಯಾಂಗ ತನಿಖೆ ಮಾಡಬಹುದು ಈ ಬಗ್ಗೆ ಇಂಜಿನಿಯರಿಂಗ್ ಎಕ್ಸ್‌ಪರ್ಟ್‌ನ್ಸನ್ನು ಅಲ್ಲಿಗೆ ಕಳುಹಿಸಿ ಮತ್ತೊಮ್ಮೆ ವಿಚಾರಣೆ ಮಾಡಿಸುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಪೋಲೀಸ್ ಸ್ಟೇಷನ್‌ನಲ್ಲಿ ಒಬ್ಬರು ಸತ್ತಾಗ ಆ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಸಿದಿರಿ. ಆದರೆ ಇಲ್ಲಿ 6 ಜನರು ಸತ್ತಿರುವಾಗ ಏಕೆ ಮಾಡಿಸಬಾರದು? ಇಲ್ಲಿ 5 ಗಂಟೆಗೆ ಬೆಂಕಿ ಬಿತ್ತು ಎಂದು ಹೇಳಿದ್ದೀರಿ. ಅದು ಸರಿಯಲ್ಲ, 4 ಅಥವಾ ನಾಲ್ಕೂವರೆ ಗಂಟೆಯ ಸಮಯದಲ್ಲಿ ಬಿದ್ದಿದೆ. ಆದಕಾರಣ ತಾವು ಇಲ್ಲಿ ಕೊಟ್ಟಿರುವ ವರದಿ ಪೂರ್ಣವಾಗಿ ಸತ್ಯವಾಗಿಲ್ಲ, ಇಲ್ಲಿ ನಡೆದಿರುವ ಸಂಗತಿಯನ್ನು ಮುಚ್ಚಿಡಲು ಸಾಕಷ್ಟು ವ್ಯವಸ್ಥೆ ಮಾಡಿದ್ದಾರೆ. ಇದರಲ್ಲಿ ಏನೋ ಪಿತೂರಿ ನಡೆದಿದೆ ಎಂಬುದಾಗಿ ಆ ಭಾಗದ ಸದಸ್ಯರೇ ಹೇಳುತ್ತಿದ್ದಾರೆ. ಹೋದ ವರ್ಷ ಕೂಡ ಇದೇ ರೀತಿ ಬೆಂಕಿ ಬಿದ್ದಾಗ ರಾತ್ರಿ 9 ಗಂಟೆಯ ಹೊತ್ತಿನಲ್ಲಿ ಇನ್‌ಷೂ ರೆನ್ಸ್ ಆಫೀಸರ್ ಬರುವ ಅಗತ್ಯವಾದರೂ ಏನಿತ್ತು? ಈ ಬಗ್ಗೆ ತಾವು ಅಧಿಕಾರಿಗಳ ಮಾತನ್ನು ಕೇಳದೆ ನ್ಯಾಯಾಂಗ ತನಿಖೆ ಮಾಡಿಸಬೇಕು. ಆಲ್ಲಿ ಬೆಂಕಿ ಬಿದ್ದಾಗ ಆ ಫ್ಯಾಕ್ಟರಿ ಇನ್ಸ್‌ಪೆಕ್ಟರ್ ಏನು ಮಾಡುತ್ತಿದ್ದರು? ಅಲ್ಲಿ ಎಷ್ಟು ಜನರು ಕೆಲಸ ಮಾಡುತ್ತಿದ್ದರೆಂಬುದಕ್ಕೆ ಅಟೆಂಡೆನ್ಸ್ ರಿಜಿಸ್ಟರ್ ಇಲ್ಲ. ಅವರಿಗೆ ಎಷ್ಟು ಕೂಲಿ ಸಿಗುತ್ತಿತ್ತು ಎಂಬುದಕ್ಕೆ ವಿವರವಿಲ್ಲ. ಈ ಎಲ್ಲ ಕಾರಣಗಳಿಂದ ತಪ್ಪಿತಸ್ಥರನ್ನು ಕಂಡುಹಿಡಿಯುವ ನಲುವಾಗಿ ಈ ಬಗ್ಗೆ ನ್ಯಾಯಾಂಗ ವಿಚಾರಣೆ ಮಾಡಿಸುವುದಕ್ಕೆ ತಾವು ಒಪ್ಪುತ್ತೀರೆಂದು ನಾನು ನಂಬಿದ್ದೇನೆ. ಇದರಿಂದ ತಮ್ಮ ಪ್ರೆಸ್ಟೀಜ್ ಸಹ ಜಾಸ್ತಿಯಾಗುತ್ತದೆ.

ಶ್ರೀ ಕೆ. ಎಚ್. ರಂಗನಾಥ್,—ಇದು ನನ್ನ ಪ್ರೆಸ್ಟೀಜ್ ಪ್ರಶ್ನೆಯಲ್ಲ ಮತ್ತು ಸರ್ಕಾರದ ಪ್ರೆಸ್ಟೀಜ್ ಪ್ರಶ್ನೆಯಲ್ಲ. ಇಲ್ಲಿ ಹೆಣ್ಣು ಮಕ್ಕಳು ಹೊಟ್ಟೆಪಾಡಿಗೆ ಕೆಲಸಕ್ಕೆ ಬಂದು ಸತ್ತು ಹೋಗಿದ್ದಾರೆ. ಇದರಿಂದ ಅವರು ಮಕ್ಕಳು ಅನಾಥರಾಗುತಕ್ಕಂಥ ಪರಿಸ್ಥಿತಿ ಬಂದಿದೆ. ಇದನ್ನು ಸರ್ಕಾರ ಲಘುವಾಗಿ ತೆಗೆದುಕೊಂಡಿದೆ ಎಂದು ಈ ಮನೆಯ ಮಾನ್ಯ ಸದಸ್ಯರಾರೂ ಭಾವಿಸಬಾರದು. ಮತ್ತು ಸರ್ಕಾರ ಸಹ ಆ ರೀತಿ ಭಾವಿಸುವುದಿಲ್ಲ. ಇದು ಖಂಡಿತಕ್ಕೆ ಆಯಿತು. ಹೇಗೆ

ಆಯಿತು ಎಂಬುದನ್ನೆಲ್ಲಾ ವಿಚಾರ ಮಾಡತಕ್ಕಂಥ ಅವಶ್ಯಕತೆ ಇದೆ, ಅದಕ್ಕಾಗಿ ಒಳ್ಳೆಯ ತಜ್ಞ ಇಂಜಿನಿಯರ್ ಒಬ್ಬರನ್ನು ಅಲ್ಲಿಗೆ ಕಳುಹಿಸುತ್ತೇವೆ. ಇಲ್ಲಿ ನಮ್ಮ ಫೆಡರೇಷನ್ ಅವರೇ ನೇರವಾಗಿ ವ್ಯವಹಾರ ಮಾಡುತ್ತಿಲ್ಲ. ಇಂಟರ್‌ನ್ಯಾಷನಲ್ ಕಾರ್ಪೊರೇಷನ್ ಅವರಿಗೂ ಈ ನಮ್ಮ ಫೆಡರೇಷನ್ ಅವರಿಗೂ ಆಗಿರುವ ಅಗ್ರಿಮೆಂಟ್ ಪ್ರಕಾರ ಈ ಕೆಲಸಗಾರರ ಬಂದು ಜವಾಬ್ದಾರಿಯನ್ನು ನಮ್ಮ ಫೆಡರೇಷನ್ ಅವರು ಹೊರಬೇಕಾಗಿಲ್ಲ. ಆದರೂ ಸಹ ನಮ್ಮ ಫೆಡರೇಷನ್ ಅವರು 750 ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರ ಜೊತೆಗೆ ಇನ್ನು ಹೆಚ್ಚು ಹಣ ಕೊಡಬೇಕೆಂದು ಆದೇಶ ಕೊಟ್ಟಿದ್ದೇವೆ ಅದರಂತೆ ಕೊಡುತ್ತೇವೆ. 6 ಗಂಟೆಯ ಸಮಯದಲ್ಲಿ ಅಲ್ಲಿ ಬೆಂಕಿ ಕಾಣಿಸಿಕೊಂಡಿತು ಎಂದು ನಮಗೆ ವರದಿ ಬಂದಿದೆ. ಮಾನ್ಯ ಸದಸ್ಯರು 4 ಗಂಟೆಯಲ್ಲಿ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ಅವರಿಗೂ ನಮಗೂ ಭಿನ್ನಾಭಿಪ್ರಾಯವಿರಬಹುದು. ಈಗ ಯಾವುದನ್ನೂ ನಿಶ್ಚಿತವಾಗಿ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿಯೇ ವಿವರವಾದಂಥ ವಿಚಾರಣೆಯನ್ನು ಈ ಬಗ್ಗೆ ನಡೆಸಲು ಇನ್ನೂ ಒಬ್ಬ ಹಿರಿಯ ಮಟ್ಟದ ಅಧಿಕಾರಿಯನ್ನು ಅಂದರೆ ತಜ್ಞರೊಬ್ಬರನ್ನು ಅಲ್ಲಿಗೆ ಕಳುಹಿಸಿ ವಿಚಾರಣೆ ನಡೆಸುತ್ತೇವೆ, ಮತ್ತು ಮಾನ್ಯ ಸದಸ್ಯರು ಹೇಳುವಂತಹ ಪರಿಸ್ಥಿತಿ ಕಂಡುಬಂದರೆ ಸೂಕ್ತ ಕಾರ್ಯಕ್ರಮ ಕೈಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕಳೆದ ಸಲವೂ ಇದೇ ರೀತಿ ನಡೆದಿದ್ದರಿಂದ ಈ ಬಗ್ಗೆ ತನಿಖೆಯಾಗಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದಕ್ಕಾಗಿಯೇ ಸೀನಿಯರ್ ಆಫೀಸರ್ ಒಬ್ಬರನ್ನು ಕಳುಹಿಸಿ ವಿಚಾರಣೆ ಮಾಡಿಸುತ್ತೇವೆ. ಈ ಪ್ರಕರಣದಲ್ಲಿ 6 ಜನ ಹೆಣ್ಣುಮಕ್ಕಳು ಸತ್ತಿದ್ದಾರೆ ಅವರಿಗೆ 750 ರೂಪಾಯಿ ಪರಿಹಾರ ಕೊಟ್ಟಿದ್ದೇವೆ. ಇನ್ನೂ ಹೆಚ್ಚು ಕೊಡಬೇಕೆಂದು ಫೆಡರೇಷನ್ ಅವರಿಗೆ ಹೇಳಿದ್ದೇವೆ. ಇಂಟರ್‌ನ್ಯಾಷನಲ್ ಕಾಟನ್ ಕಾರ್ಪೊರೇಷನ್ ಅವರೂ ಸಹ ಕೊಡಬೇಕಾಗುತ್ತದೆ. ಅದರಂತೆ ಕೊಡುತ್ತಾರೆ. ಈ ಸಂದರ್ಭದಲ್ಲಿ ಒಂದು ಪ್ರಶ್ನೆ ಉದ್ಭವವಾಗುತ್ತದೆ. ಏನೆಂದರೆ ಇಲ್ಲಿ ಬಡ ಹೆಣ್ಣುಮಕ್ಕಳು ಕೆಲಸ ಮಾಡುವಾಗ ಅವರ ಜೀವಕ್ಕೆ ಹಾನಿ ಒದಗುವಂತಹ ಸನ್ನಿವೇಶವಿರುವುದರಿಂದ, ಆಲ್ಲಯ ಸಾಮಾನುಗಳಿಗೆ ಇನ್ಷೂರೆನ್ಸ್ ಮಾಡಿಸುವಂತೆ. ಅವರ ಜೀವನಕ್ಕೂ ಇನ್ಷೂರೆನ್ಸ್ ಮಾಡಿಸಿದರೆ, ಇಂತಹ ತೊಂದರೆಗಳಿಗೆ ಯಾರಾದರು ತುತ್ತಾದಾಗ, ಅವರಿಗೆ ಹೆಚ್ಚಿಗೆ ಅನುಕೂಲವಾಗಬಹುದೆಂದು ನನ್ನ ಅಭಿಪ್ರಾಯ. ಆದ್ದರಿಂದ ಈ ಬಗ್ಗೆ ಒಂದು ಕಾನೂನನ್ನು ತೆಗೆದುಕೊಂಡು ಬಂದರೆ ಇಂತಹ ಘಟನೆಗಳಿಗೆ ತುತ್ತಾಗುವವರಿಗೆ ಅನುಕೂಲವಾಗುತ್ತದೆ. ಇಲ್ಲಿ ಯಾರು ಯಾರು ದಿನೂಕೂಲಿ ಮಾಡುತ್ತಿದ್ದರೋ ಅವರ ಬಗ್ಗೆ ಲೆಕ್ಕ ಇಟ್ಟಿದ್ದರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಈ ಜವಾಬ್ದಾರಿ ಫೆಡರೇಷನ್ ಅವರಿಗೆ ಸಂಬಂಧಪಟ್ಟಿದ್ದಲ್ಲ. ಅವರನ್ನು ಇಂಟರ್‌ನ್ಯಾಷನಲ್ ಕಾಟನ್ ಕಾರ್ಪೊರೇಷನ್ ಅವರು ನೇಮಕ ಮಾಡಿಕೊಂಡಿರಬಹುದು. ಆದಕಾರಣ ಇದನ್ನೆಲ್ಲಾ ವಿಚಾರಣೆ ಮಾಡಿಸುತ್ತೇವೆ.

ಶ್ರೀ ಗೋಪಿನಾಥ್ ಆರ್. ಸಾಂಧ್ರ.—ಈ ಘಟನೆ ನಡೆದುದರಿಂದ ಹುಬ್ಬಳ್ಳಿಯಲ್ಲಿ ಪ್ರಕ್ಷುಬ್ಧ ವಾತಾವರಣ ಉಂಟಾಗಿದೆ ಆ ವಾತಾವರಣವನ್ನು ತಿಳಿಮಾಡಬೇಕು ಎಂದು ನಾನು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಏಕೆಂದರೆ, ಇವರು ಇಲ್ಲಿ ಹೇಳಿಕೆ ಕೊಟ್ಟಿರುವುದಕ್ಕೂ ಅಧಿಕಾರಿಗಳ ಹೇಳಿಕೆಗೂ ಒಂದಕ್ಕೊಂದು ಸಂಬಂಧವಿಲ್ಲ. ನಾನು 29ನೇ ತಾರೀಖು ಬೆಳಿಗ್ಗೆ 9 ಗಂಟೆಗೆ ಆಲ್ಲಿಗೆ ಹೋಗಿದ್ದೆ ಅಲ್ಲಿ ಪೋಲೀಸರನ್ನು ಎಷ್ಟು ಜನ ಸತ್ತಿದ್ದಾರೆ ಎಂದು ಕೇಳಿದಾಗ ಅವರು 4 ಜನ ಸತ್ತಿದ್ದಾರೆ ಎಂದು ಹೇಳಿದರು. ಆಮೇಲೆ ಪೋಲೀಸ್ ಅಧಿಕಾರಿಗಳನ್ನು ಕೇಳಿದೆ, ಅವರು ಕೂಡ 4 ಜನ ಸತ್ತಿದ್ದಾರೆ ಎಂದು ಹೇಳಿದರು. ಆಮೇಲೆ ರೀಜನಲ್ ಮ್ಯಾನೇಜರನ್ನು ಕೇಳಿದೆ ಅವರು ನನಗೆ ಅಂಕಿಅಂಶ ಗೊತ್ತಿಲ್ಲ ಎಂದು ಹೇಳಿದರು. ಆಗ ನಾನು ಇನ್ನೂ ಹೆಚ್ಚು ಜನ ಸತ್ತಿದ್ದಾರೆ ಅವರ ಕುಟುಂಬದವರು ಇಬ್ಬರು ನನ್ನ ಹತ್ತಿರ ಬಂದಿದ್ದರು, ಅವರ ಹೆಸರು ಇಂತಿಂಥಾದ್ದು ಇದೆ ಎಂದು ಹೇಳಿದೆ. ಅವರು ಒಳಗಡೆ ಹೆಣ ಇದೆ ಹೋಗಿ ನೋಡಿ ಎಂದು ಹೇಳಿದರು, ಅಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದರು ಎಂದು ಕೇಳಿದಾಗ, ಅವರು ಮಸ್ಟರ್ ರೋಲ್ ನಮ್ಮ ಹತ್ತಿರ ಇಲ್ಲ, ಅದು ಇಂಟರ್‌ನ್ಯಾಷನಲ್ ಕಾಟನ್ ಕಾರ್ಪೊರೇಷನ್‌ನವರು ಕಾಂಟ್ರಾಕ್ಟ್ ಕೊಟ್ಟಿದ್ದಾರೆ. ನಮ್ಮ ಜವಾಬ್ದಾರಿ ಇಲ್ಲಿ ಎಂದು ಹೇಳಿದರು ಯಾರು ಫ್ಯಾಕ್ಟರಿ ನಡೆಸುತ್ತಿದಾರೆ ಅವರು ತಮ್ಮ ಫ್ಯಾಕ್ಟರಿಯಲ್ಲಿರತಕ್ಕವರನ್ನು ಸಂರಕ್ಷಣೆ ಮಾಡುವುದು ಅವರ ಕರ್ತವ್ಯ. ಇಂಟರ್‌ನ್ಯಾಷನಲ್ ಕಾಟನ್ ಕಾರ್ಪೊರೇಷನ್‌ನವರು ಯಾರಿದ್ದಾರೆ ಅವರನ್ನು ಕರೆಯಿರಿ ಎಂದು ಫೋನ್ ಮಾಡಿದಾಗ ಅವರು

ಇರಲಿಲ್ಲ. ಎಷ್ಟು ಜನ ಕೆಲಸಮಾಡುತ್ತಿದ್ದಾರೆ ಎನ್ನುವುದನ್ನು ಮಸ್ಟರ್ ರೋಲ್ ನೋಡೋಣ ಎಂದು ಕೇಳಿದರೆ ಅದಕ್ಕೆ ಉತ್ತರ ಇಲ್ಲ. ಕೆ. ಎಂ. ಸಿ ಆಸ್ಪತ್ರೆಯಲ್ಲಿ ವಿಚಾರಿಸಿದಾಗ ಸತ್ತವರ ಸಂಖ್ಯೆ 10 ಜನ ಎಂದು ಹೇಳಿದರು. ಪ್ರೋಲೀಸರ ಹೇಳಿಕೆ ಪ್ರಕಾರ 8 ಜನ ಎಂದು ಇದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಸ್ಪಷ್ಟೀಕರಣ ಕೇಳುವುದನ್ನು ಬಿಟ್ಟು. ನಾನು ಅಲ್ಲಗೆ ಹೋಗಿದ್ದೆ, ಅವರು ಹಾಗೆ ಹೇಳಿದರು, ಇವರು ಹೀಗೆ ಹೇಳಿದರು ಎಂದು ಭಾಷಣ ಮಾಡಿದರೆ ಹೇಗೆ ?

ಶ್ರೀ ಗೋಪಿನಾಥ್ ಆರ್. ಸಾಂಧ್ರ.—ಮಾನ್ಯ ಸಚಿವರು ಕೊಟ್ಟಂಥ ಹೇಳಿಕೆ ಸತ್ಯಕ್ಕೆ ದೂರ ವಾದುದು, ಇದರ ಬಗ್ಗೆ ಸರಿಯಾಗಿ ವಿಚಾರಣೆಯಾಗಬೇಕು ಎನ್ನುವುದು ನಮ್ಮ ಉದ್ದೇಶ. ಸರಿಯಾಗಿ ವಿಚಾರಣೆ ಮಾಡಿ, ಯಾರು ತಪ್ಪಿಸ್ತರು ಇದ್ದಾರೆ ಅವರಿಗೆ ಶಿಕ್ಷೆ ಕೊಡಬೇಕು. ಅಲ್ಲ ಇದ್ದಂಥ ಎಮರ್ಜೆನ್ಸಿ ಡೋರನ್ನು ಮುಚ್ಚಿದ್ದರು ಆ ಎಮರ್ಜೆನ್ಸಿ ಡೋರನ್ನು ಮುಚ್ಚದೇ ಇದ್ದಿದ್ದರೆ ಸತ್ತು ಹೋದವರ ಜೀವ ಉಳಿಯುತ್ತಿತ್ತು. ಎಮರ್ಜೆನ್ಸಿ ಡೋರು ಮುಚ್ಚಿದ್ದರಿಂದ ಅವರು ಸತ್ತರು. ಇದರಲ್ಲಿ ಸತ್ತವರ ಪೈಕಿ ಒಬ್ಬ ಹೆಣ್ಣು ಮಗಳಿಗೆ 3 ಮಂದಿ ಮಕ್ಕಳು ಇದ್ದಾರೆ. ಇವರಿಗೆ 500 ರೂಪಾಯಿ ಪರಿಹಾರ ಕೊಟ್ಟರೆ ಅವರ ಗತಿ ಏನು ? ದಯಮಾಡಿ ಮಾನ್ಯ ಮಂತ್ರಿ ಗಳು ವಿಚಾರಣೆ ಮಾಡಬೇಕು, ಆಲ್ಲಿ ಇರತಕ್ಕಂಥ ಪ್ರಕ್ಷುಬ್ಧ ವಾತಾವರಣವನ್ನು ತಿಳಿ ಮಾಡಬೇಕು.

ಶ್ರೀ ಕೆ. ಎಚ್. ರಂಗನಾಥ್ —ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಸ್ಟೇಟ್‌ಮೆಂಟ್ ಸತ್ಯಕ್ಕೆ ದೂರವಾದುದು ಎಂದು ಮಾನ್ಯ ಸದಸ್ಯರು ಹೇಳಿರತಕ್ಕ ಮಾತನ್ನು ನಾನು ಅತೀ ವಿನಯದಿಂದ ನಿರಾಕರಿಸುತ್ತೇನೆ. ನಮಗೆ ಯಾವ ಅಂಕಿಅಂಶಗಳು ದೊರೆತಿವೆಯೋ ಅದರ ಆಧಾರ ಮೇಲೆ ಈ ಒಂದು ಸ್ಟೇಟ್‌ಮೆಂಟ್ ಮಾಡಿದ್ದೇನೆ. ಮೇಲ್ಮನೆಯಲ್ಲೂ ಕೂಡ ಮಾನ್ಯ ಕಾರ್ಮಿಕ ಸಚಿವರು ದೊರೆತಿರತಕ್ಕ ಅಂಕಿಅಂಶಗಳ ಆಧಾರದ ಮೇಲೆ ಹೇಳಿದ್ದಾರೆ. ಡೆಪ್ಯುಟಿ ಕಮಿಷನರ್ ಒಂದು ಟೆಲಿಗ್ರಾಮನ್ನು ಕಳಿಸಿದ್ದಾರೆ, ಇದರಲ್ಲಿ ಇನ್ನೂ ಹೆಚ್ಚು ವಿಚಾರ ಇರಬಹುದು ಎಂದು ಹೇಳಿದೆ. ಇದರ ಬಗ್ಗೆ ಪರಿಶೀಲಿಸಲು ಅಧಿಕಾರಿಗಳನ್ನು ಕಳುಹಿಸಿ ಈ ಘಟನೆ ಹೇಗೆ ಆಯಿತು, ಏನಾಯಿತು ಎನ್ನುವುದನ್ನು ನೋಡಿಸುತ್ತೇನೆ ಈ ಫೈರ್ ಆಕ್ಸಿಡೆಂಟ್ ನಡೆದದ್ದು 28ನೇ ತಾರೀಖು. ಮಾನ್ಯ ಸದಸ್ಯರಾದ ಗೋಪಿನಾಥ್ ಸಾಂಧ್ರ ಮತ್ತು ಸನದಿಯವರು ಆ ಕ್ಷೇತ್ರದಿಂದಲೇ ಬರತಕ್ಕವರು. ಅವರಲ್ಲಿ ಇದರ ಬಗ್ಗೆ ಅಂಕಿಅಂಶಗಳು ಇದ್ದರೆ, 28ನೇ ತಾರೀಖು ಈ ಅಕಸ್ಮಿಕ ಸಂಭವ ವಿಸಿದ್ದು 29ನೇ ತಾರೀಖು ನನಗೆ ಪತ್ರ ಬರೆದಿದ್ದರೆ ವಿಚಾರಣೆ ಮಾಡಿಸಲಿಕ್ಕೆ ಇನ್ನೂ ಹೆಚ್ಚಿನ ಅನುಕೂಲವಾಗುತ್ತಿತ್ತು. ಮಾನ್ಯ ಸದಸ್ಯರು ನಾನು ಮಾಡಿರತಕ್ಕ ಸ್ಟೇಟ್‌ಮೆಂಟ್ ಸತ್ಯಕ್ಕೆ ದೂರವಾದುದು ಎನ್ನುವ ಮಾತನ್ನು ಈ ಸಭೆಯಲ್ಲಿ ಹೇಳಬಾರದಾಗಿತ್ತು. ಇದರ ಬಗ್ಗೆ ನಾನು ಅತಿಮವಾಗಿ ಹೇಳಲಿಲ್ಲ. ಅಲ್ಲಿ ತಜ್ಞರನ್ನು ಕಳಿಸುತ್ತೇವೆ, ಇಂಜಿನಿಯರನ್ನು ಕಳಿಸುತ್ತೇವೆ, ಮುಖ್ಯಾಧಿಕಾರಿಗಳನ್ನು ಕಳಿಸುತ್ತೇವೆ. ಅವರು ಇದು ಹೇಗೆ ನಡೆಯಿತು, ಏನು ನಡೆಯಿತು ಎನ್ನುವುದರ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಫ್ಯಾಕ್ಟರಿ ಯಲ್ಲಿ 5 ಗಂಟೆ ಆದ ತಕ್ಷಣ ಕಾರಿಂಗ್ ಮಾಡುತ್ತಾರೆ, ಆಗ ಹಿಂದೆ ಇದ್ದ ಬಾಗಿಲನ್ನು ಮುಚ್ಚ ತಕ್ಕ ಪ್ರತೀತಿ ಇರುತ್ತದೆ. ಹೆಣ್ಣು ಮಕ್ಕಳು ಇನ್ನೂ ಅಲ್ಲೇ ಇದ್ದರು ಹಿಂದೆ ಇದ್ದಂಥ ಬಾಗಿಲು ಮುಚ್ಚದೇ ಇದ್ದ ಪಕ್ಷದಲ್ಲಿ ಹೆಣ್ಣು ಮಕ್ಕಳು ಆಕಡೆಯಿಂದ ಹೋಗಿದ್ದರೆ ಈ ಘಟನೆ ಆಗುತ್ತಾ ಇರಲಿಲ್ಲ. 5 ಗಂಟೆ ಆದ ತಕ್ಷಣ ಕೆಲಸ ಮಾಡತಕ್ಕವರು ಮನೆಗೆ ಹೋಗತಕ್ಕ ಪ್ರವೃತ್ತಿ ಇರುತ್ತದೆ. ಇದರ ಬಗ್ಗೆ ವಿಚಾರಣೆ ಮಾಡಿಸಲಿಕ್ಕೆ ಪ್ರಯತ್ನ ಪಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಪಡುವುದಿಲ್ಲ. ಆಗಬಾರದಂಥ ಘಟನೆ ಆಗಿದೆ. ಮಾನ್ಯ ಸದಸ್ಯರು ಹೇಳಿದ ರೀತಿ ನಡೆದಿದ್ದರೆ ಅದನ್ನು ನಿವಾರಣೆ ಮಾಡುವದು ನಮ್ಮ ಕರ್ತವ್ಯ. ಆ ದಿಶೆಯಲ್ಲಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಎಂದು ಈ ಸಭೆಯಲ್ಲಿ ವಿನಯದಿಂದ ಹೇಳುತ್ತೇನೆ.

(*ii*) *re* : *Strike by the medical College Students at Bangalore.*

SRI T. R. SHAMANNA (Forty).—I Call the Attention of the Minister for Health to the strike by the Medical College Students at Bangalore